ಈ ವಿದ್ಯುತ್ ಉತ್ಪಾದನೆ ಮಾಡುವುದಕ್ಕೆ ನಿಮಗೆ ಎಷ್ಟು ಹಣ ಬೇಕಾಗಬಹುದು? ಮತ್ತು ಇದಕ್ಕೆ ಹಣಕಾಸು ಲಭ್ಯ ಮಾಡಿಕೊಳ್ಳುವುದಕ್ಕೆ ಏನೇನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ ಎಂಬ ಬಗ್ಗೆ ಸ್ಪಷ್ಟೀಕರಣ ನೀಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ :- ಈ ಹಣಕಾಸಿನ ಸಂಬಂಧ ವಿವಿಧ ಬ್ಯಾಂಕ್ ಗಳಿರಬಹುದು, Power Finance Corporation ನಿಂದಲೂ ಹಣ ಕೊಡುತ್ತಾರೆ, ಇದಕ್ಕೆ ಹಣಕಾಸಿನ ತೊಂದರೆ ಏನೂ ಇಲ್ಲ. ಆದರೆ, ಕೆಲವು ಕಡೆ ಪರಿಸರವಾದಿಗಳ ಪ್ರತಿಭಟನೆ ಇದೆ. ಅದನ್ನೆಲ್ಲಾ ನೋಡಿಕೊಂಡು, ಎಲ್ಲರ ಸಹಕಾರ ಪಡೆದುಕೊಂಡು ನೋಡಿ ಮಾಡುತ್ತೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :- ಮಾನ್ಯ ಸಚಿವರು ಜಲ ವಿದ್ಯುತ್ ಯೋಜನೆಯ ಪಟ್ಟಿ ಕೊಟ್ಟಿದ್ದಾರೆ. ನೀವು CREDLE ಮೂಲಕ sanction ಮಾಡಿದ್ದು ಅದರಲ್ಲಿ ಎಷ್ಟು ಪ್ರಾರಂಭವಾಗಿದೆ? ಎಷ್ಟು trading ಆಗುತ್ತಿದೆ? ಅಂದರೆ, ಒಬ್ಬರು permission ತೆಗೆದುಕೊಂಡು ಇನ್ನೊಬ್ಬರಿಗೆ ಮಾರಾಟ ಮಾಡುವಂಥದ್ದು ಎಷ್ಟಾಗುತ್ತಿದೆ ಎನ್ನುವ ಬಗ್ಗೆ ತಾವು ಹೇಳಬೇಕು.

ಶ್ರೀ ಹೆಚ್.ಡಿ. ರೇವಣ್ಣ :- ಪಟ್ಟಿ ಕೊಟ್ಟಿದ್ದೇನೆ. ಅದರ ಬಗ್ಗೆ details ಬೇಕಾದರೆ, ತಾವು ಉಪ ಪ್ರಶ್ನೆ ಕೇಳಿ, ನಾನು ಮಾಹಿತಿ ತರಿಸಿಕೊಡುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ಕರ್ನಾಟಕ ರಾಜ್ಯದಲ್ಲಿ ಪ್ರತಿ ದಿವಸದ ಬೇಡಿಕೆಯೂ ಸೇರಿ ಒಟ್ಟು ನಮ್ಮ ವಿದ್ಯುತ್ ಅವಶ್ಯಕತೆ ಎಷ್ಟಿದೆ? ಈಗ ಉತ್ಪಾದನೆಯಾಗುತ್ತಿರುವುದು ಎಷ್ಟು ಮೆಗಾ ವ್ಯಾಟ್? ಅಂದರೆ, ರಾಜ್ಯಕ್ಕೆ ಎಷ್ಟು ಮೆಗಾ ವ್ಯಾಟ್ ವಿದ್ಯುತ್ತಿನ ಅವಶ್ಯಕತೆ ಇದೆ? ಮತ್ತು ಎಷ್ಟು ಮೆಗಾ ವ್ಯಾಟ್ ವಿದ್ಯುತ್ ಉತ್ಪಾದನೆಯಾಗುತ್ತಿದೆ? ಅದರ ಬಗ್ಗೆ ದಯವಿಟ್ಟು ತಿಳಿಸಬೇಕು.

ಶ್ರೀ ಹೆಚ್.ಡಿ. ರೇವಣ್ಣ :- ರಾಜ್ಯದಲ್ಲಿ ಅವಶ್ಯಕತೆ ಇರುವ ವಿದ್ಯುತ್ ಪ್ರಮಾಣ 45000 MU ಇದ್ದು, availability 41000 MU ಇದೆ.

<u>ಕುಡಿಯುವ ನೀರಿನ ಯೋಜನೆ :-</u>

92 (604) ಶ್ರೀ ತಿಪ್ಪಾರೆಡ್ಡಿ ಜಿ.ಹೆಚ್. (ಚಿತ್ರದುರ್ಗ) :- ಮಾನ್ಯ ಪೌರಾಡಳಿತ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಚಿತ್ರದುರ್ಗ ನಗರದಲ್ಲಿ ಕುಡಿಯುವ ನೀರಿನ ಸಮರ್ಪಕ ಪೂರೈಕೆಗೆ, ಕಾಮಗಾರಿ ಮಂಜೂರಾಗಿದ್ದು, ಕರ್ನಾಟಕ ನಗರ ನೀರು ಸರಬರಾಜು ಒಳಚರಂಡಿ ಮಂಡಳಿಯಿಂದ ಕಾಮಗಾರಿ ನಡೆಯುತ್ತಿದ್ದು ಇದನ್ನು ಯಾವಾಗ ಪೂರ್ಣಗೊಳಿಸಲಾಗುವುದು;

2) ಚಿತ್ರದುರ್ಗ ಜನತೆಗೆ ಕುಡಿಯುವ ನೀರಿನ ಸರಬರಾಜನ್ನು ಎಂದಿನಿಂದ ಪ್ರಾರಂಭಿಸಲಾಗುವದು?

ಶ್ರೀ ಆಲಂಗೂರು ಶ್ರೀನಿವಾಸ್ (ಪೌರಾಡಳಿತ ಸಚಿವರು) :

1) ಆಗಸ್ಟ್ 2007 ರ ಅಂತ್ಯಕ್ಕೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

2) ಸೆಪ್ಟೆಂಬರ್ 2007 ರಿಂದ ಪ್ರಾರಂಭಿಸಲಾಗುವುದು.

ಶ್ರೀ ಜಿ.ಹೆಚ್. ತಿಪ್ಪಾರೆಡ್ಡಿ :- ಮಾನ್ಯ ಅಧ್ಯಕ್ಷರೆ ಉತ್ತರ ಒದಗಿಸಿದ್ದಾರೆ. ಆಗಸ್ಟ್ ತಿಂಗಳಲ್ಲಿ ಪೂರ್ಣಗೊಳಿಸಿ ಸೆಪ್ಟೆಂಬರ್ ತಿಂಗಳಲ್ಲಿ ನೀರನ್ನು ಕೊಡುತ್ತೇವೆ ಎಂದು ಹೇಳಿದ್ದಾರೆ. ಮಾನ್ಯ ಸಚಿವರ ಗಮನಕ್ಕೆ ತರುವುದೇನೆಂದರೆ, ಈ ಪ್ರಾಜೆಕ್ಟ್ ಅನ್ನು 1999 ರಲ್ಲಿ ಪ್ರಾರಂಭ ಮಾಡಬೇಕಾದ ಸಂದರ್ಭದಲ್ಲಿ 2000 ನೇ ಇಸವಿಯಲ್ಲಿ ಇದಕ್ಕೆ Administrative approval ಕೊಡಬೇಕಾದರೆ, 2002 ನೇ ಇಸವಿಗೆ ಇದನ್ನು complete ಮಾಡಿ ಚಿತ್ರದುರ್ಗ ನಗರದ ಜನರಿಗೆ ಕುಡಿಯುವ ನೀರು ಕೊಡಬೇಕೆಂದು ಸರ್ಕಾರ ಮಂಜೂರಾತಿ ಕೊಟ್ಟಿತ್ತು. ಈಗ 2007 ನೇ ಇಸವಿಯಲ್ಲಿದ್ದೇವೆ. ಕಳೆದ ಒಂದು ವರ್ಷದಿಂದ ನಾನು ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳನ್ನು ಕರೆದು ಚಿತ್ರದುರ್ಗದಲ್ಲಿ ಮೀಟಿಂಗ್ ಮಾಡಿದಾಗ, ಮುಂದಿನ ತಿಂಗಳು ಕೊಡುತ್ತೇವೆಂದು ಹೇಳುತ್ತಿದ್ದಾರೆ. ಈಗ ಸಚಿವರು ಆಗಸ್ಟ್ ತಿಂಗಳಲ್ಲಿ ನೀರು ಕೊಡುತ್ತೇವೆಂದು ಹೇಳಿದ್ದಾರೆ. ಇದು ಸಾಧ್ಯವೇ ಎಂದು ಕೇಳಬಯಸುತ್ತೇನೆ.

ಶ್ರೀ ಆಲಂಗೂರು ಶ್ರೀನಿವಾಸ್ :- ಇದು ತಡವಾಗುವುದಕ್ಕೆ ಕಾರಣವೇನೆಂದರೆ, ಸುಮಾರು 68 ಕಿ.ಮೀ ಅಂತರದಿಂದ ಪೈಪ್ ಬರಬೇಕಾಗಿತ್ತು. ಆದರೆ ಇದನ್ನು 5 ರೈಲ್ವೆ ಕ್ರಾಸಿಂಗ್‌ನಲ್ಲಿ ಒಳಗಡೆ ಒಂದು ಪೈಪ್ ಅನ್ನು ಅಳವಡಿಸುವ ಸಂದರ್ಭದಲ್ಲಿ ಇದಕ್ಕೆ ಕೇಂದ್ರ ಸರ್ಕಾರದಿಂದ ಅನುಮತಿ ಬಂದಿರಲಿಲ್ಲ. ಈ ಅನುಮತಿ ಬರಬೇಕಾದರೆ ಸುಮಾರು ಎಡು ವರ್ಷಗಳಾಯಿತು. ಕೆಲವು ದಿನಗಳ ಹಿಂದೆ ಅನುಮತಿ ಸಿಕ್ಕಿತು. ಆ ಕಾರಣದಿಂದ, ಈಗ ಅದನ್ನು ಪ್ರಾರಂಭ ಮಾಡಿ, ಪೂರ್ತಿಗೊಳಿಸತಕ್ಕಂಥ ಕೆಲಸವಾಗಿದೆ. ಇದೊಂದೇ ಅಲ್ಲ, ಈ ಭೀಮಾ ಸಮುದ್ರ

ಹಳ್ಳಿ ಪಕ್ಕದಲ್ಲಿ 300 ಮೀಟರ್ ಪೈಪ್ ಹಾಕುವ ಸಂದರ್ಭದಲ್ಲಿ ಕೆಲವು ಅಡಚಣೆಗಳು ಉಂಟಾದವು. ಅದನ್ನೂ ಕೂಡ ಈಗ ಬಗೆಹರಿಸಿದಂತಾಗಿದೆ. 66 ಕೆ.ವಿ. ಲೈನು ಎಳೆಯಬೇಕಾದರೆ, ರೈತರು ಕೋರ್ಟ್‌ಗೆ ಹೋಗಿ ಅದಕ್ಕೆ ತಡೆಯಾಜ್ಞೆ ತಂದಿದ್ದರು. ಈ ಎಲ್ಲಾ ಕಾರಣಗಳಿಂದ, ಸುಮಾರು 1999 ರಲ್ಲಿ ಪ್ರಾರಂಭವಾಗಿರುವ ಕೆಲಸ 7–8 ವರ್ಷಗಳು ತಡವಾಗಿದ್ದು, ಇವೆಲ್ಲಾ ಕೂಡ ಇವತ್ತಿನ ದಿವಸ ಪೂರ್ಣವಾಗಿ ನಿವಾರಣೆಯಾಗಿದೆ. ಬರುವ ತಿಂಗಳಲ್ಲಿ ನೀರು ಸರಬರಾಜು ಮಾಡುವುದಕ್ಕೆ ಸಿದ್ಧತೆ ನಡೆಸುತ್ತಿದ್ದೇವೆ. ಸೆಪ್ಟೆಂಬರ್ ತಿಂಗಳಲ್ಲಿ ಕುಡಿಯುವ ನೀರನ್ನು ಕೊಡುವುದಕ್ಕೆ ಕೂಡ ಪ್ರಾರಂಭ ಮಾಡುತ್ತೇವೆಂದು ತಮ್ಮ ಮೂಲಕ ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಜಿ.ಹೆಚ್. ತಿಪ್ಪಾರೆಡ್ಡಿ :– ಮಾನ್ಯ ಮಂತ್ರಿಗಳು, ನೀರು ಬರುವಂಥ ಸಂದರ್ಭದಲ್ಲಿ ಕೆಲವು ಊರಿನಲ್ಲಿ ಅಡಚಣೆಗಳಿದ್ದವೆಂದು ಹೇಳಿದರು. ಅದು ನನ್ನ ಕ್ಷೇತ್ರಕ್ಕೆ ಬರದಿದ್ದರೂ ನಾನು ಕೂಡ ಅಲ್ಲಿರುವವರಿಗೆ ಸಮಾಧಾನ ಹೇಳಿ ಸರಿ ಮಾಡಿಕೊಟ್ಟಿದ್ದೆ. ನಾನು ನಿನ್ನೆ ದಿವಸ ಬರುವಾಗಲೂ ಕೂಡ ನೋಡಿಕೊಂಡು ಬಂದೆ. ಭೀಮಸಮುದ್ರ ಎಂದು ಏನು ಹೇಳಿದಿರಿ, ಅಲ್ಲಿ ಮತ್ತೆ ಅವರು ಅಡ್ಡ ಬಂದಿದ್ದಾರೆ. ಯಾರೋ ಒಬ್ಬರು ನಮ್ಮ ಪಕ್ಕದ ಮನೆಯ ಮೇಲೆ ಹೋಗುತ್ತದೆಂದು ನಿಲ್ಲಿಸಿದ್ದಾರೆ. ಕೇಂದ್ರ ಸರ್ಕಾರದ ರೈಲ್ವೆ ಇಲಾಖೆಯಿಂದ ಕೂಡ ಈಗ ಅನುಮತಿ ಬಂದಿದ್ದು, ಈಗೇನೋ ಕೊಡುತ್ತೇವೆಂದು ಹೇಳುತ್ತಿದ್ದಾರೆ. ಈ ಎಲ್ಲಾ ಸಣ್ಣ ಪುಟ್ಟ ಅಡಚಣೆಗಳು ಇನ್ನೂ ಇವೆ. ಚಿತ್ರದುರ್ಗ ನಗರದ ಕೆಲವು ಭಾಗಗಳಲ್ಲಿ ಇನ್ನೂ distribution pipeline ಹಾಕಿಲ್ಲ. ಇದರ ಜೊತೆಯಲ್ಲಿ, current ಕೊಡುವುದಕ್ಕೆ power line ಎಳೆಯಬೇಕಾದರೆ, ಇಬ್ಬರು ಮೂವರು ಹೊಲದಲ್ಲಿ ತೊಂದರೆ ಮಾಡುತ್ತಿದ್ದಾರೆಂದು ಹೇಳಿದಿರಿ. ಇವೆಲ್ಲಾ ಅಡಚಣೆಗಳು ಇದ್ದರೂ ಕೂಡ, ಮುಂದಿನ ತಿಂಗಳು ಇದನ್ನು ಮುಗಿಸುತ್ತೇವೆಂದು ಹೇಳಿದಿರಿ. ಇದು ಸಾಧ್ಯವೇ ಎಂದು ಮತ್ತೊಂದು ಸಲ ಕೇಳುತ್ತಾ, ಈ ಬಗ್ಗೆ ತಮ್ಮ ಇಲಾಖೆಯ ಅಧಿಕಾರಿಗಳನ್ನು ಕೇಳಿ ಹೇಳಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಆಲಂಗೂರು ಶ್ರೀನಿವಾಸ್ :– ಇದೆಲ್ಲ ಕೂಡ ಈಗಾಗಲೇ ಪೂರ್ತಿಯಾಗಿದೆ. ಗೌರವಾನ್ವಿತ ಶಾಸಕರೂ ಕೂಡ ಇದಕ್ಕೆ ಬಹಳ ಸಹಕಾರ ನೀಡಿದ್ದು, ಹಳ್ಳಿಯಲ್ಲೇನು ತಕರಾರಿತ್ತು, ಅದನ್ನು ಪೂರ್ತಿಯಾಗಿ ನಿವಾರಣೆ ಮಾಡಿರತಕ್ಕಂಥದ್ದಕ್ಕೆ ಅವರ ಸಹಕಾರ ಸಿಕ್ಕಿದೆ. ಈಗ 300 ಅಡಿ ಪೈಪ್ ಅಳವಡಿಸುವುದಕ್ಕೆ ಅನೇಕ ರಾಜಕಾರಣಿ ವ್ಯಕ್ತಿಗಳು ಇದ್ದರೂ ಕೂಡ ಅದನ್ನು ಅವರೂ ಕೂಡ ಕುಳಿತುಕೊಂಡು ಬಗೆಹರಿಸಿದ್ದಾರೆ. ಬಹುಶಃ ಇದನ್ನು 2007 ರ

ಮುಂದಿನ ತಿಂಗಳು ಕೊಡುವುದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಕೂಡ ಇದಕ್ಕೆ ಒಪ್ಪಿಗೆ ಕೊಟ್ಟಿದ್ದಾರೆ.

(11 : 30 ಘಂಟೆ)

ಬಹುಶಃ ಸೆಪ್ಟೆಂಬರ್ ತಿಂಗಳೊಳಗೆ ನೀರು ಕೊಡುವುದಕ್ಕೆ ಪ್ರಾರಂಭ ಮಾಡುತ್ತೇವೆಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ.

ಶ್ರೀ ಜಿ.ಹೆಚ್. ತಿಪ್ಪಾರೆಡ್ಡಿ :– ತಾವು ಈಗ ಸೆಪ್ಟೆಂಬರ್ ತಿಂಗಳಲ್ಲಿ ನೀರು ಕೊಡುತ್ತೇವೆಂದು ಹೇಳಿದ್ದೀರಿ. ಇದು ನಿಜವಗಿಯೂ ಸಂತೋಷದ ವಿಚಾರ. ಇದರ ಜೊತೆಯಲ್ಲಿ ನಾನು ತಮಗೆ sugestion ಕೊಡುವುದೇನೆಂದರೆ, ಮೊದಲಿಗೆ ತಾವು ನೀರು ಕೊಟ್ಟು ಅದಾದಮೇಲೆ ತಮ್ಮ ಇಲಾಖಾಧಿಕಾರಿಗಳ ಮೂಲಕ ಚಿತ್ರದುರ್ಗ ನಗರದ ನಾಗರೀಕರನ್ನು ಕರೆದು ಸಭೆ ಕರೆದು ಮೀಟರ್ ಅಳವಡಿಸುವುದಕ್ಕೆ ಮನವೊಲಿಸುವ ಕೆಲಸವನ್ನು ತಮ್ಮ ಅಧಿಕಾರಿಗಳು ಮಾಡುವುದಕ್ಕೆ ತಾವು direction ಕೊಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಆಲಂಗೂರು ಶ್ರೀನಿವಾಸ್ :– ಇದನ್ನು ಪರಿಶೀಲನೆ ಮಾಡಿ ಖಂಡಿತವಾಗಿಯೂ ಕೂಡ ಸಾರ್ವಜನಿಕರೆಲ್ಲರೂ ಒಪ್ಪಿಗೆ ಕೊಟ್ಟಾಗ, ಇದು ಬಹಳ ಉತ್ತಮವಾದ ಸಲಹೆ. ಇದನ್ನು ಮಾಡತಕ್ಕಂಥದ್ದಕ್ಕೆ ನೀರು ಕೊಟ್ಟ ನಂತರ ತಮ್ಮೆಲ್ಲರ ಸಲಹೆ ಪಡೆದುಕೊಂಡು ಯಾವ ರೀತಿ ಕ್ರಮ ತೆಗೆದುಕೊಳ್ಳಬೇಕೆನ್ನುವ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತೇನೆ.

ಶ್ರೀ ಜಿ.ಹೆಚ್. ತಿಪ್ಪಾರೆಡ್ಡಿ :– ಮೊದಲು ನೀರು ಕೊಟ್ಟು ಅನಂತರ ಮಾಡಿ.

ಶ್ರೀ ಆಲಂಗೂರು ಶ್ರೀನಿವಾಸ್ :– ನೀರು ಕೊಟ್ಟ ನಂತರ ಮಾಡುತ್ತೇವೆ.

<u>ಸಿಂಧನೂರು ಪಟ್ಟಣದ ಕ್ರೀಡಾಂಗಣ :–</u>

93 (452) ಶ್ರೀ ಬಾದರ್ಲಿ ಹಂಪನಗೌಡ (ಸಿಂಧನೂರು) :– ಮಾನ್ಯ ಯುವಜನಸೇವಾ ಹಾಗೂ ಕ್ರೀಡಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಿಂಧನೂರು ಪಟ್ಟಣಕ್ಕೆ ಮಂಜೂರಾಗಿರುವ ಕ್ರೀಡಾಂಗಣದ ಅಂದಾಜು ಮೊತ್ತವೆಷ್ಟು;

ಆ) ಇಲ್ಲಿಯವರೆಗೆ ಖರ್ಚಾದ ಮೊತ್ತವೆಷ್ಟು;